# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **142** |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಕಾರ್ಯದ ಅನಿವಾರ್ಯತೆ ಇದೆಯೇ; ಇದ್ದಲ್ಲಿ, ಅನಿವಾರ್ಯತೆಗೆ ಕಾರಣಗಳನ್ನು ನೀಡುವುದು; | ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (Central Electricity Authority) ದಿನಾಂಕ: 23.12.2019 ರ ಅಧಿಸೂಚನೆಯಲ್ಲಿ "ಎಲ್ಲಾ ಹೊಸ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ನಿರ್ದೇಶಿಸಲಾಗಿದೆ.<br><br>ನಂತರ ಭಾರತ ಸರ್ಕಾರದ ಇಂಧನ ಸಚಿವಾಲಯದ ದಿನಾಂಕ:23.05.2022 ರ ಆದೇಶದಲ್ಲಿ ರೈತರ ಕೃಷಿ ಪಂಪ್ ಸೆಟ್ ಗಳನ್ನು ಹೊರತು ಪಡಿಸಿ ಎಲ್ಲಾ ಗ್ರಾಹಕರ ವಿದ್ಯುತ್ ಸ್ಥಾವರಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ನಿರ್ದೇಶಿಸಲಾಗಿದೆ.<br><br>ಕರ್ನಾಟಕಕ್ಕೆ ಸಂಬಂಧಿಸಿದಂತೆ, KERC ಸಂಸ್ಥೆಯು ಒಂದು ಸ್ವಾಯಸ್ಥ ಸಂಸ್ಥೆಯಾಗಿದ್ದು Conditions of Supply (CoS) ಹಾಗೂ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚಿಸುವ ಅಧಿಕಾರ ಹೊಂದಿರುತ್ತದೆ. ಕೇಂದ್ರ ಸರ್ಕಾರ ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರವು ಮೇಲಿನ ಅಧಿಸೂಚನೆ ಹಾಗೂ ಆದೇಶಗಳ ಅನ್ವಯ ದಿನಾಂಕ 06.02.2024 ಹಾಗೂ ದಿನಾಂಕ 06.03.2024 ರಂದು KERC ಯು ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ನಿಯಾಮಾವಳಿಗಳನ್ನು ಜಾರಿಗೆ ತರಲಾಗಿರುತ್ತದೆ.<br><br>ಈ ನಿಯಮಾವಳಿಗಳಂತೆ, ರಾಜ್ಯದಲ್ಲಿ ಎಲ್ಲಾ ಹೊಸ ಗ್ರಾಹಕರು (Permanent Connections) ಹಾಗೂ ಎಲ್ಲಾ ಹೊಸ ತಾತ್ಕಾಲಿಕ ಗ್ರಾಹಕರು (Temporary Connections) ಕಡ್ಡಾಯವಾಗಿ ಸ್ಮಾರ್ಟ್ ಮೀಟರ್ ಅಳವಡಿಸುವುದು ಅನಿವಾರ್ಯತೆ ಇರುತ್ತದೆ. |
| ಆ) | ಇಲ್ಲಿಯವರೆಗೆ ಒಟ್ಟು ಎಷ್ಟು ಸ್ಮಾರ್ಟ್ ಮೀಟರ್‌ಗಳನ್ನು ಇಲಾಖೆ ವತಿಯಿಂದ ಖರೀದಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಇಲ್ಲಿಯವರಗೆ ಸ್ಮಾರ್ಟ್ ಮೀಟರ್‌ಗಳನ್ನು ಇಲಾಖೆ ವತಿಯಿಂದ ಖರೀದಿಸಿರುವುದಿಲ್ಲ. ಆದರೆ ಕೆ.ಇ.ಆರ್.ಸಿ. ನಿರ್ದೇಶನದಂತೆ ಕರ್ನಾಟಕದಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಗ್ರಾಹಕರೇ ಖರೀದಿಸಬೇಕಾಗಿರುತ್ತದೆ. |

<table>
<tr>
<td>ಇ)</td>
<td>ಸ್ಮಾರ್ಟ್ ಮೀಟರ್‌ಗಳನ್ನು ಗ್ರಾಹಕರಿಗೆ ಯಾವ ದರದಲ್ಲಿ ಅಳವಡಿಸಲಾಗಿದೆ; (ಮಾಹಿತಿಯನ್ನು ಒದಗಿಸುವುದು)</td>
<td>ಬೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನೀಡಿರುವ ಗುತ್ತಿಗೆ ಆದೇಶದ ಅನ್ವಯ ನಿಗದಿಪಡಿಸಿರುವ ದರಗಳು ಈ ಕೆಳಕಂಡಂತಿವೆ:
<table>
<tr><th rowspan="2">ಕ್ರ. ಸಂ</th><th rowspan="2">ವಿವರಣೆ</th><th>ದರ (ಜಿ.ಎಸ್.ಟಿ ಹೊರತುಪಡಿಸಿ) ರೂ. ಗಳಲ್ಲಿ</th><th>ದರ (ಜಿ.ಎಸ್.ಟಿ @18% ಸೇರಿಸಿ ರೂ. ಗಳಲ್ಲಿ</th><th>ಒಟ್ಟು ಮೊತ್ತ ರೂ. ಗಳಲ್ಲಿ</th></tr>
<tr><th colspan="3">(ಗ್ರಾಹಕರು ಪಾವತಿಸಬೇಕು)</th></tr>
<tr><td rowspan="2">1</td><td>ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್ ದರ</td><td>4068</td><td>4800</td><td rowspan="2">4998/-</td></tr>
<tr><td>ಪಾಲಿಕಾರ್ಬೋನೇಟ್ ಬಾಕ್ಸ್ ದರ</td><td>167.8</td><td>198</td></tr>
<tr><td rowspan="2">2</td><td>ತ್ರೀ ಫೇಸ್ ಸ್ಮಾರ್ಟ್ ಮೀಟರ್ ದರ</td><td>7203</td><td>8500</td><td rowspan="2">8880/-</td></tr>
<tr><td>ಪಾಲಿಕಾರ್ಬೋನೇಟ್ ಬಾಕ್ಸ್ ದರ</td><td>322.03</td><td>380</td></tr>
<tr><td rowspan="3">3</td><td>ತ್ರೀ ಫೇಸ್ ಸಿ.ಟಿ ಆಪರೇಟೆಡ್ ಸ್ಮಾರ್ಟ್ ಮೀಟರ್ ದರ</td><td>9237</td><td>10900</td><td rowspan="3">28080/-</td></tr>
<tr><td>ಪಾಲಿಕಾರ್ಬೋನೇಟ್ ಬಾಕ್ಸ್ ದರ</td><td>3475</td><td>4101</td></tr>
<tr><td>ಸಿ.ಟಿ (4 ಸಂಖ್ಯೆ)</td><td>11085</td><td>13080</td></tr>
</table>
ಮೇಲಿನ ದರದಂತೆ ಗ್ರಾಹಕರು outlets ಗಳಿಂದ ಮೀಟರ್ ಖರೀದಿಸಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.<br>
ಮೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್‌ಗಳ ದರಗಳು ಇನ್ನೂ ಅಂತಿಮಗೊಳಿಸಿರುವುದಿಲ್ಲ.</td>
</tr>
<tr>
<td>ಈ)</td>
<td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಸರ್ಕಾರಿ ಕಛೇರಿಗಳಲ್ಲಿ ಸ್ಮಾರ್ಟ್ ಮೀಟರ್‌ಗಳಾಗಿ ಪರಿವರ್ತಿಸಿ ಆಸ್ತಿ ತೆರಿಗೆ ಮೇಲೆ ವಿಧಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಸ್ಮಾರ್ಟ್ ಮೀಟರ್ ಅಳವಡಿಕೆಗಾಗಿ ಯಾವುದೇ ತೆರಿಗೆ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

| | | |
|---|---|---|
| ಉ) | ಆರ್.ಡಿ.ಎಸ್.ಎಸ್. ಪ್ರಸ್ತಾವನೆ ಸಮಿತಿಯ ಕ್ರಿಯಾ ಯೋಜನೆ ಮತ್ತು ಡಿ.ಪಿ.ಎ.ಆರ್.ನ ಸಂಪೂರ್ಣ ಮಾಹಿತಿ ನೀಡುವುದು? | ಆರ್.ಡಿ.ಎಸ್.ಎಸ್ ಯೋಜನೆಯ ಮಾರ್ಗಸೂಚಿಯಂತೆ, ಕ್ರಿಯಾ ಯೋಜನೆ ಮತ್ತು ಯೋಜನಾ ವರದಿಯನ್ನು ದಿನಾಂಕ: 23.12.2021 ರಂದು ನಡೆದ ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿ (ಎಸ್.ಎಲ್.ಡಿ.ಆರ್.ಸಿ) ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದ್ದು, ಸಮಿತಿಯು ಕ್ರಿಯಾ ಯೋಜನೆ ಮತ್ತು ಯೋಜನಾ ವರದಿಯನ್ನು ಅಂಗೀಕರಿಸಿ, ಸಚಿವ ಸಂಪುಟದ ಅನುಮೋದನೆಗಾಗಿ ಸಲ್ಲಿಸಲು ಶಿಫಾರಸ್ಸು ಮಾಡಿದೆ. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>ಸದರಿ ಪ್ರಸ್ತಾವನೆಗಳ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ: |

| ಕ್ರ. ಸಂ | ಕಾಮಗಾರಿ | ಮೊತ್ತ (ರೂ ಕೋಟಿಗಳಲ್ಲಿ) | | | | |
|---|---|---|---|---|---|---|
| | | ಬೆಸ್ಕಾಂ | ಮೆಸ್ಕಾಂ | ಸೆಸ್ಕ್ | ಹೆಸ್ಕಾಂ | ಜೆಸ್ಕಾಂ |
| 1 | ಸ್ಮಾರ್ಟ್ ಮೀಟರಿಂಗ್ | 4977.00 | 1539.23 | 2199.32 | 1213.30 | 2337.44 |
| 2 | ವಿತರಣಾ ನಷ್ಟ ಕಡಿಮೆಗೊಳಿಸುವ ಕಾಮಗಾರಿಗಳು (Los reduction works) | 3209.00 | 741.43 | 778.48 | 1522.60 | 2864.57 |
| 3 | ಆಧುನೀಕರಣ ಮತ್ತು ಜಾಲ ಬಲವರ್ಧನೆ ಕಾಮಗಾರಿಗಳು (Modernizatio and System Augmentation Works) | | 732.53 | 801.26 | 1204.51 | 3057.21 |
| | **ಒಟ್ಟು** | **8186.00** | **3013.19** | **3779.06** | **3940.41** | **8259.22** |

ಸಂಖ್ಯೆ: ಎನರ್ಜಿ 150 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು